
ತಿರುಮಲ ಮುಂಡರ್ಗಿ

# ಮಹಾರಥಿ

ಮಹಾರಥಿ
ಬಂಗಾರದ ಕೂದಲು,
ಕಡೆದಂಥ ಶರೀರ,
ರತ್ನಖಚಿತ ಕಿರೀಟ,
ಮತ್ತವನ ಬಂಗಾರದ ರಥ.
ಚಿಮ್ಮುವ ಕಿರಣಗಳಲ್ಲಿ
ಮಿಂದೆದ್ದ ಶ್ವೇತಾಶ್ವಗಳು
ವಿವಿಧ ವರ್ಣ ತಾಳಲು
ನಾನವರ ಕೇಳಿದೆ:
ಎಲ್ಲಿಗೆ ಹೋಗುತ್ತಿದ್ದೀರಾ?
ಬಿಳಿಧೋತ್ರ, ಬರಿಯ–ಎದೆ,
ರಥದ ಹಿಂದೆ ನೃತ್ಯ–ಗೀತೆ,
'ನಮಗೆ ಗೊತ್ತಿಲ್ಲ, ಅವನನ್ನೇ ಕೇಳಿ,'
ಎಂದು
ಅವನತ್ತ ಕೈಮಾಡಿದರು.



# ನಮ್ಮ - ನಿಮ್ಮ

ನಮ್ಮ ಮನೆಯ ಮುಂದೆ ನಿಮ್ಮ ಕಸ,
ನಿಮ್ಮ ಮನೆಯ ಮುಂದೆ ನಮ್ಮ ಕಸ;

ನಮ್ಮ ಗೋಡೆಗಳು: ನಿಮ್ಮ ಪೋಸ್ಟರು, ಭಿತ್ತಿಲೇಖನ;
ನಮ್ಮ ಕಂಬಗಳು: ನಿಮ್ಮ ಜಯಂತಿ, ಜನ್ಮದಿನ;

ನಮ್ಮ ಗೇಟಿನ ಮುಂದೆ ನಿಮ್ಮ ಟಾಮಿಯ ಒಂದು–ಎರಡು;
ನಿಮ್ಮ ಗೇಟಿನ ಮುಂದೆ ನಮ್ಮ ಟೈಗರನ ಕಾರ್ಯಕ್ರಮ.

ನಮ್ಮ–ನಿಮ್ಮಿಬ್ಬರ ಕಿವಿಯ ಮೇಲೂ ಹೂವು;
ನಮ್ಮ–ನಿಮ್ಮ ಕಾಲುಗಳ ಕೆಳಗೆ ಜಾಲಿ ಮುಳ್ಳು.